# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ:03.04.2021 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 3. | ಶ್ರೀ. ಮಂಜುನಾಥ | ಕಿ.ಅ.ಪ |
| 4. | ಶ್ರೀ. ಜಗದೀಶ್ | ಹಿ.ಆ.ಪ |
| 5. | ಶ್ರೀ. ರವಿಕುಮಾರ್ | ಸಾರ್ವಜನಿಕರು |
| 6. | ಶ್ರೀ. ರಮೇಶ್ | ಸಾರ್ವಜನಿಕರು |
| 7. | ಶ್ರೀ. ಪ್ರಸಾದ್ | ಸಾರ್ವಜನಿಕರು |
| 8. | ಶ್ರೀ. ಶಿವಕುಮಾರ್ | ಕಂ.ಪ |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

ಶ್ರೀ.ರವಿಕುಮಾರ್ ರವರು 3ನೇ ಬಿ ಮುಖ್ಯರಸ್ತೆಯಲ್ಲಿ ಎಲ್ ಮಾದರಿ ಚರಂಡಿಯಲ್ಲಿ ಶೇಖರವಾಗಿರುವ ಮಣ್ಣನ್ನು (Silt) ನ್ನು ತೆರವುಗೊಳಿಕೊಡಬೇಕೆಂದು ವಿನಂತಿಸಿದರು. ಪರಿಹರಿಸಿಕೊಡುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು. ಅದೇ ರಸ್ತೆಯಲ್ಲಿ ರಸ್ತೆ ಗುಂಡಿಗಳು ಉಂಟಾಗಿದ್ದು ಅದನ್ನೂ ಸಹ ಮುಚ್ಚಿಸಲು ಕ್ರಮ ಕೈಗೊಳ್ಳುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.

ನೆಹರು ರಸ್ತೆಯ ಎರಡು ಬದಿಯಲ್ಲಿ ಅಂಗಡಿಗಳ ಶೀಟ್‌ಗಳನ್ನು ಮುಂದಕ್ಕೆ ಚಾಚಿ Platform ಗಳನ್ನು ಕಟ್ಟಿಕೊಂಡು ಇರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆಂದು ಪರಿಶೀಲನೆ ಮಾಡಿ ತೆರವುಗೊಳಿಸಿಕೊಡಬೇಕೆಂದು ಶ್ರೀ.ರಮೇಶ್ ರವರು ಕೋರಿದರು. ಶ್ರೀ. ಜಗದೀಶ್ ಹಿ.ಆ.ಪ ರವರು ಸ್ಥಳಕ್ಕೆ ಭೇಟಿ ನೀಡಿ ಪರಿಹರಿಸಿಕೊಡುವುದಾಗಿ ತಿಳಿಸಿದರು.

ಕೋವೀಡ್-19 ಸದ್ಯ ಈಗ ಮೂರು ಕೇಸ್‌ಗಳು ಚಾಲ್ತಿಯಲ್ಲಿ ಇರುತ್ತವೆ ಮೂರು ಜನರು ಈಗ Victoriya Hospital ಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುತ್ತಾರೆ ಪ್ರತಿ ದಿನವು ವಾರ್ಡ್‌ನಲ್ಲಿ Testing ಮತ್ತು ಲಸಿಕೆ ನೀಡುವ ಪ್ರಕ್ರಿಯಗಳು ನಿರಂತರವಾಗಿ ನಡೆಯುತ್ತಿದೆ. ಎಂದು ಜಗದೀಶ್ ರವರು ಸಭೆಗೆ ತಿಳಿಸಿದರು.

ನೆಹರು ರಸ್ತೆಯ ಮೂರನೇ ಕ್ರಾಸ್ GYM ಕಟ್ಟಡದ ಬಳಿ ಇರುವ ಕಸದ ಕೇಂದ್ರವನ್ನು ಸ್ಥಳಾಂತರಿಸಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಶ್ರೀ. ಪ್ರಸಾದ್ (ಸಾರ್ವಜನಿಕರು) ರವರು ಕೋರಿದರು. ಪ್ರತಿ ದಿನವು ಕಸವನ್ನು ತೆಗೆದು ಜಾಗವನ್ನು ಸಹ ಸ್ವಚ್ಛಗೊಳಿಸಿ ಡಿ.ಡಿ.ಟಿ ಸಿಂಪಡಿಸುತ್ತಿರುವುದಾಗಿ ಶ್ರೀ. ಮಂಜುನಾಥ್ ಹಿ.ಅ.ಪ ರವರು ಸಭೆಗೆ ತಿಳಿಸಿದರು.

(Silt & Tractor) ಕಾಮಗಾರಿಯು ವಾರ್ಡ್ ನಲ್ಲಿ ನಿರ್ವಹಿಸದೆ ಇರುವುದರಿಂದ ಎಲ್ಲಾ ರಸ್ತೆಗಳಲ್ಲಿ ಮಣ್ಣು ವಗೈರೆ, ಶೇಖರವಾಗಿದ್ದು, ಅದರ ಮೇಲೆಯೇ ಸಾರ್ವಜನಿಕರು ಕಸ ಹಾಕುತ್ತಿರುತ್ತಾರೆ, ಇದರಿಂದ ಕಸ ತೆಗೆಯಲೂ ಸಹ ತೊಂದರೆಯಾಗುತ್ತಿದೆ ಇದನ್ನು ತಪ್ಪಿಸಲು (Silt & Tractor) ಕಾಮಗಾರಿ ಅವಶ್ಯಕತೆ ಇರುತ್ತದೆ. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಜಯನಗರ ಉಪ-ವಿಭಾಗ) ರವರು ಮತ್ತು ಕಾರ್ಯಪಾಲಕ ಅಭಿಯಂತರರು (ವಿಜಯನಗರ ವಿಭಾಗ) ರವರಿಗೆ ವಾರ್ಡ್ ಸಮಿತಿಯ ನಡವಳಿಗಳ ಮೂಲಕ (Silt & Tractor) ಕಾಮಗಾರಿಯನ್ನು ಚಾಲ್ತಿಗೆ ತರುವಂತೆ ಕೋರಲಾಗಿದೆ.

ಈ ಸಭೆಯಲ್ಲಿ ಚರ್ಚಿಸಿರುವ ಸಮಸ್ಯೆಗಳನ್ನು ಬಗೆಹರಿಸಿ ಪಾಲನಾ-ವರದಿ ಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು

ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 03.04.2021

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134
AE-134.